ದಿನಾಂಕಃ 22-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ

ನನ್ನ ಜೊತೆಯಲ್ಲಿ ಆರೋಪಿ ತುಂಬಾ ವಿಶ್ವಾಸದಿಂದ ಇದ್ದು ನಂಬಿಸಿ ಮೋಸ ಮಾಡಿ, ನನ್ನ ಖಾತೆಗೆ ಆರೋಪಿ ನಂಬರ್ ಮತ್ತು ಬೇರೆಯವರ ಮೊಬೈಲ್ ನಂಬರ್ ಗಳನ್ನು ಕೊಟ್ಟು ಬದಲಾವಣೆ ಕೊಟ್ಟು ನನಗೆ ಸಂದೇಶ ಬರದ ಹಾಗೆ ಮಾಡುತ್ತಿದ್ದರು. ನನ್ನ ಲ್ಯಾಪ್ ಟ್ಯಾಪ್ ಮತ್ತು ಚೆಕ್ ಬುಕ್ ಗಳನ್ನು ತೆಗೆದುಕೊಂಡು ಹೋಗಿದ್ದು ನನ್ನ ಚೆಕ್ ಬುಕ್ ಆರೋಪಿ ಬಳಿ ಇರುತ್ತದೆ. ಆ ಎಲ್ಲಾ ಚೆಕ್ ಬುಕ್ ಗಳಿಗೆ ನನ್ನ ಸಹಿಯನ್ನು ಪಡದುಕೊಂಡಿರುತ್ತಾರೆ. ನಾನು ಚೆಕ್ ಬುಕ್ ಗಳನ್ನು ವಾಪಸ್ಸು ಕೊಡಬೇಕಾದರೆ ನನ್ನೊಂದಿಗೆ ಸಹಕರಿಸು ಅಂತ ಹೇಳುತ್ತಿದ್ದು ಈ ವಿಚಾರವಾಗಿ ದೂರು ಕೊಡಲು ಹೋದಾಗ ಕೋವಿಡ್ ಇರುವ ಕಾರಣ ದೂರನ್ನು ಕೊಟ್ಟಿರಲ್ಲಿ ಅಲ್ಲದೆ ನನ್ನ ಸ್ನೇಹಿತರು ಬ್ಯಾಂಕ್ ನಲ್ಲಿ ವಿಚಾರ ಮಾಡೋಣ ಅಂತ ಹೇಳಿರುತ್ತಾರೆ. ಮತ್ತೆ ಸ್ನೇಹಿತರು ಆಂದ್ರದಲ್ಲಿ ವಿಚಾರ ಮಾಡೋಣ ಅಂತ ಹೇಳಿರುತ್ತಾರೆ. ನನ್ನ ಮೊಬೈಲ್ ಗೆ ಬೇರೆ ಬೇರೆ ಅಶ್ಲೀನ ಮೆಸೇಜ್ ಬರುತ್ತಿದ್ದು ಅದನ್ನು ತಡೆಯಲಾಗದೆ ನಾನು ದೂರು ದಾಖಲು ಮಾಡಿರುತ್ತೇನೆ. ದೂರು ದಾಖಲು ಮಾಡಿದ ದಿನವೇ ಮದ್ಯಾಹ್ನ ಪೋಲಿಸರು ಬಂದು ಪಂಚನಾಮೆಯನ್ನು ಬರೆದುಕೊಂಡು ಹೋಗಿರುತ್ತಾರೆ. ಆಗ ಮದ್ಯಾಹ್ನ ಆಗಿದ್ದು ನಾನು ಚಾಸ4 ಮತ್ತು 6 ರವರು ಇದ್ದು ಸಮಯ 1 ಗಂಟೆಯಿಂದ 2 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಅಲ್ಲಿ ನಡೆದಂತಹ ವಿಚಾರದ ಬಗ್ಗೆ ಸಾಕ್ಷಿದಾರರನ್ನು ಕರೆಸಿ ಕೇಳಿರುತ್ತಾರೆ. ಅಲ್ಲದೆ ರತ್ನಮ್ಮ ಚಾಸ3 ರವರ ಗಂಡನಿಗೆ ಆರೋಪಿ ಕರೆ ಮಾಡಿ ನೀವು ಈ ರೀತಿ ಮಾಡಿದರೆ ನಿಮ್ಮ ಮೇಲೆ ಒಂದು ಕೋಟಿ ರೂಗಳಷ್ಟು ಮಾನಹಾನಿ ಪ್ರಕರಣ ದಾಖಲು ಮಾಡುತ್ತೇನೆ ಅಂತ ಹೆದರಿಸಿರುತ್ತಾರೆ. ಚಾಸ2 ರವರಿಗೂ ಸಾಕ್ಷ್ಯ ಹೇಳಬಾರದು ಅಂತ ಹೇಳಿ ಬೆದರಿಕೆಯನ್ನು ಹಾಕಿ ಅವರ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲು ಮಾಡಿದ್ದು ಅದರ ಮೇಲೆ ಬಿ ವರದಿ ಆಗಿರುತ್ತದೆ. ನಾನು ದೂರನ್ನು ದಾಖಲು ಮಾಡುವಾಗ ರತ್ನಮ್ಮ ರವರ ಬದಲಿಗೆ ಲತಾ ಎಂದು

ಬೆರಳಚ್ಚು ಪಡಿಸಿದ್ದು ಆ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಮರು ಹೇಳಿಕೆಯನ್ನು ನೀಡಿರುತ್ತೇನೆ. ಗೈರು ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ದೂರನ್ನು ಸಾಕ್ಷಿ ನೋಡಿ ಅದನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಾಕ್ಷಿ ನೋಡಿ ಅದನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು 200 ರೂ ವೆಚ್ಚದೊಂದಿಗೆ ಪಾಟೀಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.